ಆಧುನಿಕ ಸಂದರ್ಭದಲ್ಲಿ ಸರ್ವಂತರ್ಯಾಮಿ ಎನ್ನುವ ವಿಶೇಷಣ ಪ್ಲಾಸ್ಟಿಕ್‌ಗೆ ಸಲ್ಲಬೇಕು. ಮಣ್ಣು ಮುಗಿಲುಗಳಲ್ಲಿ, ಸಾಗರದ ತಳದಲ್ಲೂ ಪ್ಲಾಸ್ಟಿಕ್ ತುಂಬಿದ್ದೇವೆ. ಭೂಮಿ, ಗಾಳಿ, ನೀರು – ಎಲ್ಲವೂ ಪ್ಲಾಸ್ಟಿಕ್‌ಮಯ! ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕಬೇಕೆನ್ನುವ ಚಿಂತನೆ ಈಗ ವಿಶ್ವದೆಲ್ಲೆಡೆ ಚಾಲ್ತಿಯಲ್ಲಿದೆ. ಭಾರತದಲ್ಲಿ, ಏಕಬಳಕೆ ಪ್ಲಾಸ್ಟಿಕ್ ಅನ್ನು 2022ರ ಜುಲೈ 1ರಿಂದ ನಿಷೇಧಿಸಲಾಗಿದೆ. ಮತ್ತೊಂದೆಡೆ, ನೈಸರ್ಗಿಕವಾಗಿ ಮಣ್ಣಲ್ಲಿ ಕೊಳೆಯುವ, ಕರಗುವಂತಹ ‘ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್’ ಬಳಕೆಯನ್ನು ಉತ್ತೇಜಿಸುವ ಪ್ರಯತ್ನಗಳು ನಡೆಯುತ್ತಿವೆ. ಆದರೆ, ಪ್ಲಾಸ್ಟಿಕ್ ನಿಷೇಧ ಸುಲಭವಾದುದಲ್ಲ. ಈಗಾಗಲೇ ಪ್ಲಾಸ್ಟಿಕ್ ನಿಷೇಧದ ಪ್ರಯತ್ನಗಳು ‘ಗುಮ್ಮ’ನಂತೆ ತಲೆದೋರಿ, ಪ್ರಹಸನದ ರೂಪದಲ್ಲಿ ಪರ್ಯವಸಾನಗೊಂಡಿವೆ, ಪ್ಲಾಸ್ಟಿಕ್ ಬಳಕೆ ಮತ್ತಷ್ಟು ಹೆಚ್ಚಾಗಿದೆ. ಪ್ಲಾಸ್ಟಿಕ್ ನಿಷೇಧದ ಸಾಧ್ಯತೆ–ವಸ್ತುಸ್ಥಿತಿಯ ಕುರಿತ ಈ ವಿಶ್ಲೇಷಣೆ, ಆಡಳಿತಾತ್ಮಕವಾಗಿ ಮಾತ್ರವಲ್ಲ, ವೈಯಕ್ತಿಕ ನೆಲೆಯಲ್ಲೂ ಪ್ಲಾಸ್ಟಿಕ್ ವಿರೋಧಿ ಮನಸ್ಥಿತಿ ರೂಪುಗೊಳ್ಳಬೇಕಾದ ಅಗತ್ಯವನ್ನು ಪ್ರತಿಪಾದಿಸುತ್ತದೆ.

